

# ಮದುಮಗಳು ನೀನಿಂದು

ಮದುಮಗಳು ನೀನಿಂದು ಮದುಮಗನು ನಾನಲ್ಲ
ಬಚ್ಚಿಟ್ಟ ಪ್ರೀತಿಗೆ ಈ ಶಿಕ್ಷೆ ಬೇಕಲ್ಲ.

ಹೊಳೆಯ ದಡದಿ ನಿನ್ನ ಕೈಹಿಡಿದು ನಡೆದಾಡಬೇಕು...
ಹತ್ತಲಾಗದ ಬೆಟ್ಟಕ್ಕೆ ನಿನ್ನನ್ನೆತ್ತಿಕೊಂಡು ಹತ್ತಬೇಕು...
ಬೆಳದಿಂಗಳ ರಾತ್ರಿಯನ್ನು ನಿನ್ನ ನೋಡುತ್ತಾ ಕಳೆಯಬೇಕು...
ದೇವರಕಾಡಿನ ದಾರಿಯಲಿ ನೀ ನನ್ನ ಜೊತೆಗಾತಿಯಾಗಬೇಕು...

ಕನಸುಗಳಿಗೆ ಎಣೆಯುಂಟೆ? ಕಲ್ಪನೆಗಳಿಗೆ ಕೊನೆಯುಂಟೆ?
ಯಾವ ಕನಸೂ ನನಸಾಗಲಿಲ್ಲ,
ಯಾವ ಕಲ್ಪನೆಯೂ ನಿಜವಾಗಲಿಲ್ಲ.
ಬದುಕೆಂಬ ಪಯಣದಲಿ ನಾನೀಗ ಒಬ್ಬಂಟಿ
ದಾರಿ ಕೊನೆಯಾಯಿತು, ನಿಜ.
ಪಯಣ ಕೊನೆಯಾಯಿತೆ?

ನಿನ್ನ ಮದುವೆಯ ಸಿಹಿ ನನ್ನ ಬೆರಳುಗಳಿಗಂಟಿದೆ
ಎದೆಯ ಮಾಸದ ಗಾಯ ಇನ್ನೂ ನೋವು ನೀಡುತಿದೆ.

ನನ್ನೊಲವಿನ ನೋವು ಎಂದೆಂದೂ ನನಗಿರಲಿ,
ನಿನ್ನ ತುಟಿಯಂಚಿನ ನಗು ಎಂದೂ ಮಾಸದಿರಲಿ.

ಕೊನೆಯ ಸಲ ನಿನ್ನನ್ನು ಕಣ್ತುಂಬಾ ನೋಡಬೇಕು
ನಿನ್ನ ಮದುವೆಯೂಟ ಹೊಟ್ಟೆ ತುಂಬಾ ಉಣ್ಣಬೇಕು
ಶತಮಾನಗಳ ಪ್ರೀತಿಯ ಹಸಿವನ್ನು ಇಂದು ಕೊನೆಗೊಳಿಸಬೇಕು.

**● ಸಫ್ವಾನ್ ವೇಣೂರು**